ಕರ್ನಾಟಕ ಸರ್ಕಾರ

(ಜಲಾನಯನ ಅಭಿವೃದ್ಧಿ ಇಲಾಖೆ)

ಸಂ: ಜಅಇ/ಉಕೃನಿ/ಕೃಅ2/PMKSY-OI/ಅಬಿ/15/20-21

ಆಯುಕ್ತರ ಕಾರ್ಯಾಲಯ
ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ,ಕೆ.ಎಚ್.ಬಿ. ಸಂಕೀರ್ಣ
ಕಾವೇರಿ ಭವನ, ಕೆ.ಜಿ.ರೋಡ್
ಬೆಂಗಳೂರು-560009
ದಿನಾಂಕ:18.06.2020

## ಕಛೇರಿ ಆದೇಶ

ವಿಷಯ: ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು-ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI) ಯೋಜನೆಯಡಿ 2020-21 ನೇ ಸಾಲಿನ ಮೊದಲನೇ ಕಂತಿನ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡುವ ಕುರಿತು

ಉಲ್ಲೇಖ:
1. ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಾಲಯದ ಪತ್ರ ಸಂಖ್ಯೆ F.No:18-10/2018-RFS-III 10.02.2020.
2. ಈ ಕಛೇರಿಯ ಪತ್ರದ ಸಂಖ್ಯೆ: ಜಅಇ/ಉಕೃನಿ/ಕೃಅ2/PMKSY/ರಾಕೇಪಾಅಬಿ/3/20-21, ದಿನಾಂಕ:17.04.2020
3. ಈ ಕಛೇರಿಯ ಪತ್ರದ ಸಂಖ್ಯೆ ಜಅಇ/ಉಕೃನಿ/ಕೃಅ-2/PMKSY-OI/AAP/73/20-21/19-20 ದಿನಾಂಕ; 20.4.2020
4. ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಾಲಯದ ಪತ್ರ ಸಂಖ್ಯೆ F.No:17-4/2020-RFS-III 18.05.2020.
5. ಸರ್ಕಾರದ ಆದೇಶ ಸಂಖ್ಯೆ:ಕೃಇ19/ಕೃಉಇ/2020, ಬೆಂಗಳೂರು, ದಿನಾಂಕ:17.06.2020

********

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರ (4) ರಲ್ಲಿ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಾಲಯವು ಕರ್ನಾಟಕ ರಾಜ್ಯಕ್ಕೆ 2020-21 ನೇ ಸಾಲಿಗೆ **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು-ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC)** ಯೋಜನೆಯಡಿ ಒಟ್ಟು ರೂ.40000.00 ಲಕ್ಷಗಳ ಕೇಂದ್ರದ ಪಾಲಿನ ಅನುದಾನವನ್ನು ಹಂಚಿಕೆ ಮಾಡಿ ಆದೇಶ ಹೊರಡಿಸಿದೆ. ಸದರಿ ಆದೇಶದ ಪ್ರಕಾರ ಶೇ.20 ರಷ್ಟು ಅನುದಾನವನ್ನು ಇತರೆ ಉಪಚಾರಗಳಿಗೆ ನಿಗದಿಪಡಿಸಿದೆ.

ಮುಂದುವರೆದು ಉಲ್ಲೇಖಿತ ಪತ್ರ (1) ರಲ್ಲಿ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಾಲಯವು PMKSY-OI ಯೋಜನೆಯಡಿ 2019-20 ನೇ ಸಾಲಿನ ಕೇಂದ್ರ ಪಾಲಿನ ಎರಡನೇ ಕಂತಿನ ಅನುದಾನವಾಗಿ ಒಟ್ಟು ರೂ 4360.00 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ. ಸದರಿ ಅನುದಾನಕ್ಕೆ ರಾಜ್ಯದ ಪಾಲು ರೂ. 2906.66 ಲಕ್ಷಗಳು ಸೇರಿದಂತೆ ಒಟ್ಟು ರೂ.7266.66 ಲಕ್ಷಗಳನ್ನು ರಾಜ್ಯ ಸರ್ಕಾರವು ಬಿಡುಗಡೆ ಮಾಡಬೇಕಿತ್ತು. ಆದರೆ ರಾಜ್ಯ ಸರ್ಕಾರವು 2019-20 ನೇ ಸಾಲಿನ ಆರ್ಥಿಕ ವರ್ಷದ ಆಯವ್ಯಯದಲ್ಲಿ ಅನುದಾನ ಲಭ್ಯತೆ ಇಲ್ಲದ ಕಾರಣ, ರೂ.3326.89 ಲಕ್ಷಗಳನ್ನು ಮಾತ್ರ ಬಿಡುಗಡೆ ಮಾಡಿ, ಉಳಿಕೆ ರೂ.3939.77 ಲಕ್ಷಗಳ ಅನುದಾನವನ್ನು ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಉಲ್ಲೇಖಿತ ಪತ್ರ (3) ರಲ್ಲಿ 2020-21 ನೇ ಸಾಲಿನಲ್ಲಿ PMKSY-OI ಯೋಜನೆಯಡಿ ನೀರು ಸಂಗ್ರಹಣಾ ವಿನ್ಯಾಸಗಳ ಅನುಷ್ಠಾನಕ್ಕೆ ಆಯವ್ಯಯದಲ್ಲಿ ಲಭ್ಯವಿರುವ ರೂ.6600.00 ಕೋಟಿಗಳ ಮೊತ್ತಕ್ಕೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿತ್ತು.

ಉಲ್ಲೇಖಿತ ಪತ್ರ (2) ರಲ್ಲಿ **PMKSY-OI ಯೋಜನೆಯಡಿ** 2019-20 ನೇ ಸಾಲಿನ ಬಾಕಿ ಬಿಡುಗಡೆ ಮಾಡಬೇಕಾದ ಅನುದಾನ ರೂ.3939.77 ಲಕ್ಷಗಳ ಅನುದಾನವನ್ನು 2020-21 ನೇ ಸಾಲಿನಲ್ಲಿ ಆಯವ್ಯಯದ ಲೆಕ್ಕ ಶೀರ್ಷಿಕೆ:2402-00-102-0-30 ರಡಿ ಲಭ್ಯವಿರುವ ರೂ.6600.00 ಲಕ್ಷಗಳ ಅನುದಾನದಲ್ಲಿ ಬಿಡುಗಡೆ ಮಾಡಲು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಉಲ್ಲೇಖಿತ ಪತ್ರ (5) ರಲ್ಲಿ ಸರ್ಕಾರವು 2020-21 ನೇ ಸಾಲಿಗೆ **ಆಯವ್ಯಯದ ಲೆಕ್ಕ ಶೀರ್ಷಿಕೆ:2402-00-102-0-30 ರಡಿ ಒಟ್ಟು ರೂ.2787.5234 ಲಕ್ಷಗಳ ಅನುದಾನವನ್ನು** (ಪ್ರಧಾನ ಕಾಮಗಾರಿಗಳು-139 ರಡಿ ರೂ.2191.5234 ಲಕ್ಷಗಳು, ಪರಿಶಿಷ್ಟ ಜಾತಿ ಉಪಯೋಜನೆ-422 ರಡಿ ರೂ.391.50 ಲಕ್ಷಗಳು ಹಾಗೂ ಗಿರಿಜನ ಉಪ ಯೋಜನೆ-423 ರಡಿ ರೂ.204.50 ಲಕ್ಷಗಳು) ರಾಜ್ಯ ಮತ್ತು ಕೇಂದ್ರ ಸರ್ಕಾರವು ಆಗ್ಗಿಂದಾಗ್ಗೆ ಬಿಡುಗಡೆ ಮಾಡಿ ಹೊರಡಿಸುವ ಮಾರ್ಗಸೂಚಿಗಳ ಪ್ರಕಾರ ಅನುಷ್ಠಾನ ಮಾಡಲು ಬಿಡುಗಡೆ ಮಾಡಿ ಆದೇಶ ಹೊರಡಿಸಿದೆ.

ಈ ಹಿನ್ನೆಲೆಯಲ್ಲಿ ಪ್ರಧಾನ **ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು-ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC)** ಯೋಜನೆಯಡಿ ಈ ಕೆಳಕಂಡ ಜಿಲ್ಲೆಗಳಿಗೆ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲು ಆದೇಶ ಹೊರಡಿಸಲಾಗಿದೆ.

## ಆದೇಶ

ಪೀಠಿಕೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಇತರೆ ಉಪಚಾರಗಳು-ಪರ್ ಡ್ರಾಪ್ ಮೋರ್ ಕ್ರಾಪ್ (PMKSY-OI-PDMC)** ಯೋಜನೆಯಡಿ ಒಟ್ಟು ರೂ.2787.5234 ಲಕ್ಷಗಳ ಅನುದಾನವನ್ನು ಕೆಳಕಂಡಂತೆ ಜಿಲ್ಲೆಗಳಿಗೆ ಬಿಡುಗಡೆ ಮಾಡಿ, 2020-21 ನೇ ಸಾಲಿನ ಕ್ರಿಯಾ ಯೋಜನೆ ಹಾಗೂ ಕೇಂದ್ರ ಸರ್ಕಾರ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಯ ಮಾರ್ಗಸೂಚಿಗಳ ಪ್ರಕಾರ ವೆಚ್ಚ ಭರಿಸಲು ಸೂಚಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಜಿಲ್ಲೆ | ಆಯವ್ಯಯದ ಲೆಕ್ಕ ಶೀರ್ಷಿಕೆ: 2402-00-102-0-30 | | | ಒಟ್ಟು |
|---|---|---|---|---|---|
| | | ಪ್ರಧಾನ ಕಾಮಗಾರಿಗಳು-139 | ಪರಿಶಿಷ್ಟ ಜಾತಿ ಉಪಯೋಜನೆ-422 | ಗಿರಿಜನ ಉಪ ಯೋಜನೆ-423 | |
| **1** | **2** | **3** | **4** | **5** | **6** |
| 1 | ಬಾಗಲಕೋಟೆ | 75.00 | 15.00 | 10.00 | **100.00** |
| 2 | ಬೆಂಗಳೂರು (ಗ್ರಾ) | 40.00 | | 10.00 | **50.00** |
| 3 | ಬೆಳಗಾವಿ | 80.00 | 25.00 | 10.00 | **115.00** |
| 4 | ಬಳ್ಳಾರಿ | 60.00 | 25.00 | 10.00 | **95.00** |
| 5 | ಬೀದರ್ | 100.00 | 25.00 | 5.00 | **130.00** |
| 6 | ವಿಜಯಾಪುರ | 50.00 | 15.00 | 5.00 | **70.00** |
| 7 | ಚಾಮರಾಜನಗರ | 30.00 | 1.90 | 0.60 | **32.50** |
| 8 | ಚಿಕ್ಕಬಳ್ಳಾಪುರ | 60.00 | 20.00 | 15.00 | **95.00** |
| 9 | ಚಿಕ್ಕಮಗಳೂರು | 50.00 | | | **50.00** |
| 10 | ಚಿತ್ರದುರ್ಗ | 100.00 | 25.00 | 20.00 | **145.00** |

| ಕ್ರ ಸಂ | ಜಿಲ್ಲೆ | ಆಯವ್ಯಯದ ಲೆಕ್ಕ ಶೀರ್ಷಿಕೆ: 2402-00-102-0-30 | | | ಒಟ್ಟು |
|---|---|---|---|---|---|
| | | ಪ್ರಧಾನ ಕಾಮಗಾರಿಗಳು-139 | ಪರಿಶಿಷ್ಟ ಜಾತಿ ಉಪಯೋಜನೆ-422 | ಗಿರಿಜನ ಉಪ ಯೋಜನೆ-423 | |
| 1 | 2 | 3 | 4 | 5 | 6 |
| 11 | ದಕ್ಷಿಣ ಕನ್ನಡ | 100.00 | 11.00 | | **111.00** |
| 12 | ದಾವಣಗೆರೆ | 125.00 | 25.00 | 15.00 | **165.00** |
| 13 | ಧಾರವಾಡ | 60.00 | 8.40 | 10.00 | **78.40** |
| 14 | ಗದಗ | 150.00 | 38.70 | 5.00 | **193.70** |
| 15 | ಕಲಬುರಗಿ | 50.00 | 25.00 | 15.00 | **90.00** |
| 16 | ಹಾಸನ | 20.00 | | | **20.00** |
| 17 | ಹಾವೇರಿ | 150.00 | 25.00 | 15.00 | **190.00** |
| 18 | ಕೊಡಗು | 30.5234 | | | **30.5234** |
| 19 | ಕೋಲಾರ | 150.00 | 35.00 | 12.40 | **197.40** |
| 20 | ಕೊಪ್ಪಳ | 75.00 | | | **75.00** |
| 21 | ಮಂಡ್ಯ | 50.00 | 2.10 | | **52.10** |
| 22 | ಮೈಸೂರು | 70.00 | 15.00 | | **85.00** |
| 23 | ರಾಯಚೂರು | 70.00 | 9.80 | 11.80 | **91.60** |
| 24 | ರಾಮನಗರ | 50.00 | | | **50.00** |
| 25 | ಶಿವಮೊಗ್ಗ | 175.00 | 10.30 | 9.70 | **195.00** |
| 26 | ತುಮಕೂರು | 125.00 | 20.00 | 15.00 | **160.00** |
| 27 | ಉಡುಪಿ | 50.00 | | | **50.00** |
| 28 | ಉತ್ತರಕನ್ನಡ | 8.50 | | | **8.50** |
| 29 | ಯಾದಗಿರಿ | 37.50 | 14.30 | 10.00 | **61.80** |
| | **ಒಟ್ಟು** | **2191.5234** | **391.50** | **204.50** | **2787.5234** |

ಈ ಮೇಲಿನಂತೆ ಬಿಡುಗಡೆಯಾದ ಅನುದಾನವನ್ನು ಈ ಕೆಳಕಂಡ ನಿಯಮ ಮತ್ತು ಷರತ್ತುಗಳ ಪ್ರಕಾರ ವೆಚ್ಚ ಭರಿಸಲು ಕ್ರಮವಹಿಸುವುದು.

1. ಅನುಷ್ಠಾನ ಮಾಡಲಾಗುವ ನೀರು ಸಂಗ್ರಹಣಾ ವಿನ್ಯಾಸಗಳು ಕಡ್ಡಾಯವಾಗಿ ಜಿಲ್ಲಾ ನೀರಾವರಿ ಯೋಜನೆಯ ಭಾಗವಾಗಿರಬೇಕು
2. ಕಡ್ಡಾಯವಾಗಿ ಸಮುದಾಯದ ನೀರಿನ ಮೂಲಗಳ (Community Water Harvesting Structure) ಸೃಷ್ಟಿಗೆ ಅನುದಾನ ಬಳಸಬೇಕು. ನೀರು ಸಂಗ್ರಹಣಾ ಕಾಮಗಾರಿಗಳ ಅನುಷ್ಠಾನಕ್ಕೆ ಅಂದಾಜು ಪತ್ರಿಕೆಯನ್ನು ರೂ.5.00 ಲಕ್ಷಗಳಿಗೆ ಸೀಮಿತಗೊಳಿಸದೇ, ಸ್ಥಳದ ಬೇಡಿಕೆಯ ಆಧಾರದ ಮೇಲೆ ಅಂದಾಜು ಪತ್ರಿಕೆಯನ್ನು ತಯಾರಿಸಬೇಕು.
3. ಸಮುದಾಯ ನೀರು ಸಂಗ್ರಹಣಾ ವಿನ್ಯಾಸಗಳನ್ನು ರಾಜ್ಯ ಸರ್ಕಾರದ ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ ಹಾಗೂ ಜಲಾಮೃತ ಜಲಾನಯನ ಅಭಿವೃದ್ಧಿ ಯೋಜನೆಗಳ ವ್ಯಾಪ್ತಿಯಲ್ಲಿ ಕನಿಷ್ಠ ಶೇ.50 ರಷ್ಟು ಕ್ರಿಯಾ ಯೋಜನೆಯ ಮೊತ್ತದ ಚಟುವಟಿಕೆಗಳನ್ನು ಸೂಕ್ಷ್ಮ ನೀರಾವರಿ ಘಟಕಗಳೊಂದಿಗೆ ಜೋಡಿಸಿ ಅನುಷ್ಠಾನ ಮಾಡುವುದು. ಉಳಿದ ಸಮುದಾಯ ನೀರು ಸಂಗ್ರಹಣಾ ವಿನ್ಯಾಸಗಳನ್ನು ಈ ಮೇಲಿನ ಯೋಜನೆಗಳ ಹೊರಗೆ ಜಲಾನಯನ ತತ್ವದ ಆಧಾರದ ಮೇಲೆ ಅನುಷ್ಠಾನ ಮಾಡುವುದು.

4. ಸಮುದಾಯ ನೀರು ಸಂಗ್ರಹಣಾ ವಿನ್ಯಾಸಗಳನ್ನು ವೈಜ್ಞಾನಿಕವಾಗಿ ಸೂಕ್ತವಾದ ಸ್ಥಳಗಳಲ್ಲಿ ಅನುಷ್ಠಾನ ಮಾಡುವುದು. ಸದರಿ ಗುರುತಿಸಲಾದ ಸ್ಥಳಗಳಲ್ಲಿ run off ಲಭ್ಯತೆಯ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಮತ್ತು ಅನುಷ್ಠಾನ ಮಾಡಲಾದ ನೀರು ಸಂಗ್ರಹಣಾ ವಿನ್ಯಾಸಗಳನ್ನು ಸೂಕ್ಷ್ಮ ನೀರಾವರಿ ಘಟಕಗಳೊಂದಿಗೆ ಜೋಡಿಸಲು ಸಾಧ್ಯತೆ ಇರುವ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳುವುದು ಮತ್ತು ಸೂಕ್ಷ್ಮ ನೀರಾವರಿ ಘಟಕಗಳೊಂದಿಗೆ ಜೋಡಿಸಲು ಕ್ರಮವಹಿಸುವುದು.

5. ಜಂಟಿ ಕೃಷಿ ನಿರ್ದೇಶಕರ ಹಂತದಲ್ಲಿನ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯಿಂದ (District Level Tecnical Committee headed by JDA) ಸ್ಥಳವಾರು ಅನುಮೋದನೆಯಾದ (Location wise action plan) ಕ್ರಿಯಾ ಯೋಜನೆಯ ಪ್ರಕಾರ ಕಾಮಗಾರಿಗಳ ಅನುಷ್ಠಾನ ಮಾಡುವುದು. ಸ್ಥಳವಾರು ಕ್ರಿಯಾ ಯೋಜನೆ (Location wise action plan) ಮತ್ತು ಜಂಟಿ ಕೃಷಿ ನಿರ್ದೇಶಕರ ಹಂತದಲ್ಲಿನ ತಾಂತ್ರಿಕ ಸಮಿತಿಯ ನಡವಳಿಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.

6. ಸಮುದಾಯ ನೀರು ಸಂಗ್ರಹಣಾ ವಿನ್ಯಾಸಗಳಲ್ಲಿ ಸಂಗ್ರಹವಾಗುವ ನೀರನ್ನು ಸೂಕ್ಷ್ಮ ನೀರಾವರಿ ಘಟಕಗಳನ್ನು ಅಳವಡಿಸಿಕೊಳ್ಳುವ ಮೂಲಕ ಬೆಳೆಗಳ ಸಂದಿಗ್ಧ ಪರಿಸ್ಥಿತಿಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದಾಗಿ ಫಲಾನುಭವಿ ರೈತರಿಂದ ಮುಚ್ಚಳಿಕೆ ಪಡೆಯುವುದು.

7. ಸಮುದಾಯ ನೀರು ಕೊಯ್ಲು ವಿನ್ಯಾಸ/ ನೀರು ಸಂಗ್ರಹಣಾ ವಿನ್ಯಾಸಗಳ ಮಾಹಿತಿಯನ್ನು ಕ್ಷೇತ್ರದ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಮತ್ತು ತೋಟಗಾರಿಕೆ/ರೇಷ್ಮೆ/ಅರಣ್ಯ ಹಾಗೂ ಮೀನುಗಾರಿಕೆ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳ ಗಮನಕ್ಕೆ ತರುವುದು ಹಾಗೂ ಭಾರತ ಸರ್ಕಾರದ ಸೂಚನೆಯಂತೆ ನೀರು ಸಂಗ್ರಹಣಾ ವಿನ್ಯಾಸಗಳಿಂದ ಪ್ರಯೋಜನ ಪಡೆಯುವ ರೈತರಿಗೆ ಕಡ್ಡಾಯವಾಗಿ PMKSY-OI-PDMC (Micro-irrigation) ಕಾರ್ಯಕ್ರಮದಡಿ ಸೂಕ್ಷ್ಮ ನೀರಾವರಿ ಘಟಕಗಳನ್ನು ಅಳವಡಿಸಲು ಕ್ರಮವಹಿಸುವುದು.

8. ಸಮುದಾಯ ನೀರು ಕೊಯ್ಲು ವಿನ್ಯಾಸ/ ನೀರು ಸಂಗ್ರಹಣಾ ವಿನ್ಯಾಸಗಳಿಗೆ ಕೃಷಿ ಇಲಾಖೆ ಯಾಂತ್ರಿಕರಣ ಯೋಜನೆಯಡಿಯಲ್ಲಿನ ನೀರೆತ್ತುವ ಸಾಧನಗಳು ಮತ್ತು ಸೂಕ್ಷ್ಮ ನೀರಾವರಿ ಘಟಕಗಳೊಂದಿಗೆ ಜೋಡಣೆ ಮಾಡಲು ಅಗತ್ಯ ಕ್ರಮವಹಿಸುವುದು.

9. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರ ಜಮೀನಿನಲ್ಲಿ ಅಥವಾ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನರು ಪ್ರಾಬಲ್ಯವಿರುವ ಹಳ್ಳಿಗಳಲ್ಲಿ ಸಮುದಾಯ ನೀರು ಕೊಯ್ಲು ವಿನ್ಯಾಸ/ ನೀರು ಸಂಗ್ರಹಣಾ ವಿನ್ಯಾಸಗಳ ರಚನೆಗಳನ್ನು ಕಡ್ಡಾಯವಾಗಿ ಅನುಷ್ಠಾನ ಮಾಡುವುದು.

10. ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಅಧೀನ ಕಛೇರಿಗಳಿಗೆ ಬಿಡುಗಡೆಯಾಗುವ ಅನುದಾನವು ಇಲಾಖೆಯು ಕೈಗೊಳ್ಳುವ ಆಂತರಿಕ ಆಡಿಟ್ ಮತ್ತು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ರವರ ಕಛೇರಿಯ ಆಡಿಟ್‌ಗೆ ಒಳಪಡುತ್ತದೆ.

11. ಅನುಷ್ಠಾನ ಮಾಡುವ ಸಂಸ್ಥೆಯು (ಸಹಾಯಕ ಕೃಷಿ ನಿರ್ದೇಶಕರ ಕಛೇರಿ) ವೆಚ್ಚ ಮಾಡಲಾದ ವಿವರಗಳನ್ನು ಕ್ರಮಬದ್ದವಾಗಿ ನಿರ್ವಹಣೆ ಮಾಡಬೇಕು. ಭರಿಸಲಾದ ವೆಚ್ಚಕ್ಕೆ ಉಪಯೋಗಿತ ಪತ್ರವನ್ನು ಅಕ್ಟೋಬರ್-19 ರ ಅಂತ್ಯದೊಳಗೆ ಸಲ್ಲಿಸಬೇಕು. ಜಂಟಿ ಕೃಷಿ ನಿರ್ದೇಶಕರು ಪ್ರತಿ ತಿಂಗಳು 3ನೇ ತಾರೀಖಿನೊಳಗೆ ಈಗಾಗಲೇ ನೀಡಲಾಗಿರುವ 1 ರಿಂದ 77 ಕಾಲಂಗಳ ಪ್ರಗತಿ ವರದಿಯ ನಮೂನೆಯಲ್ಲಿ ಪ್ರಗತಿ ವರದಿಯನ್ನು ತಪ್ಪದೇ

ಯಾವುದೇ ಕೋಶಗಳಲ್ಲಿ (Cell) ಮಾಹಿತಿಗಳನ್ನು ಖಾಲಿ ಬಿಡದೇ ಭರ್ತಿ ಮಾಡಿ ಯೋಜನಾ ವಿಭಾಗಕ್ಕೆ ಸಲ್ಲಿಸುವುದು.

12. ಅನುಷ್ಠಾನ ಮಾಡುವ ಸಂಸ್ಥೆಯು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ಆರ್ಥಿಕ ಸಂಹಿತೆ ಮತ್ತು ಕರ್ನಾಟಕ ಖಜಾನೆ ಸಂಹಿತೆಯಲ್ಲಿ ಒಳಗೊಂಡಿರುವ ನಿಯಮ ಮತ್ತು ನಿಬಂಧನೆಗಳನ್ನು ತಪ್ಪದೇ ಅನುಸರಿಸಬೇಕು.

13. ಸದರಿ ಯೋಜನೆಯ ಆಡಳಿತ ಘಟಕದಡಿ ಗರಿಷ್ಠ ಶೇ.5 ರಷ್ಟು ಅನುದಾನದ ಮಿತಿ ಮೀರದಂತೆ ಈ ಕೆಳಕಂಡಂತೆ ಬಳಸಲು ಅನುಮತಿಸಿದೆ.

    (i) ಸದರಿ ಯೋಜನೆಯ ಹೊರಗುತ್ತಿಗೆ ಸಿಬ್ಬಂದಿಗಳಿಗೆ ಪರಿಶ್ರಮ ಧನ ಪಾವತಿಸುವುದು.

    (ii) ಅನುಷ್ಠಾನ ಮಾಡಲಾದ ಕಾಮಗಾರಿಗಳಿಗೆ ಉತ್ತಮ ಗುಣ ಮಟ್ಟದ ನಾಮಫಲಕಗಳನ್ನು ಅಳವಡಿಸುವುದು.

    (iii) ಕಾಮಗಾರಿಗಳ ದಾಖಲೀಕರಣ, ಛಾಯಚಿತ್ರ, ವಿಡಿಯೋ ಮತ್ತು ಯಶೋಗಾಥೆಗಳ ಪ್ರಕಟಣೆ ಮಾಡುವುದು.

14. ನೀರುಸಂಗ್ರಹಣಾ ವಿನ್ಯಾಸಗಳನ್ನು ಅನುಷ್ಠಾನಮಾಡಿದ ನಂತರ ಮಾಡಿದ ಕಾಮಗಾರಿಯ ವಿವರಗಳಾದ ಅ)ಯೋಜನೆಯ ಹೆಸರು ಆ)ಕಾಮಗಾರಿಯ ಹೆಸರು ಇ)ಅನುಷ್ಠಾನ ಮಾಡಲಾದ ವರ್ಷ ಈ)ನೀರು ಸಂಗ್ರಹಣಾ ಸಾಮರ್ಥ್ಯ ಉ)ಅಕ್ಷಾಂಶ ಮತ್ತು ರೇಖಾಂಶದ ವಿವರಗಳು ಋ)ಕಾಮಗಾರಿಯ ಅಂದಾಜು ಮೊತ್ತದ ವಿವರಗಳನ್ನು ಸಿಮೆಂಟ್‌ನಿಂದ ಪ್ಲಾಸ್ಟರಿಂಗ್ ಮಾಡುವಾಗ ಎನ್‌ಗ್ರೇವ್ ಮಾಡುವುದು ಹಾಗೂ ಪೇಂಟಿಂಗ್‌ನಲ್ಲಿ ಬರೆಯುವುದು ಹಾಗೂ/ಅಥವಾ ಪ್ರತ್ಯೇಕವಾಗಿ ನಾಮಫಲಕವನ್ನು ಹಾಕುವುದು ಕಡ್ಡಾಯ. ಇದಕ್ಕಾಗಿ ತಗಲುವ ವೆಚ್ಚವನ್ನು ಅಂದಾಜು ಪತ್ರಿಕೆಯಲ್ಲಿ ನಿಗಧಿಪಡಿಸಬೇಕು.

15. ಜಲಾನಯನ ಕಾಮಗಾರಿ/ಚಟುವಟಿಕೆಗಳ ಅಂತಿಮ ಸಂದಾಯಕ್ಕೆ ಮುನ್ನ ನಾಮಫಲಕ ಅಳವಡಿಸುವ ಬಗ್ಗೆ, ಗುಣಮಟ್ಟ ಮತ್ತು ಪ್ರಮಾಣದ ಬಗ್ಗೆ ಖಾತ್ರಿಪಡಿಸಿಕೊಂಡು ಅಂತಿಮ ಸಂದಾಯಕ್ಕೆ ಅನುಮೋದನೆ ನೀಡುವುದು.

16. ಪ್ರತಿ ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗಲೇ ಒಂದು ಪ್ರತ್ಯೇಕ ಕಡತವನ್ನು ಇಟ್ಟು, ಈ ಕೆಳಕಂಡ ದಾಖಲಾತಿಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು.

| ಕ್ರ.ಸಂ | ನಿರ್ವಹಿಸಬೇಕಾಗಿರುವ ದಾಖಲಾತಿಗಳು |
|---|---|
| 1. | ಕ್ಷೇತ್ರ/ಸ್ಥಳ ತಪಾಸಣಾ ವರದಿ |
| 2. | ಕಾಮಗಾರಿ/ಚಟುವಟಿಕೆ ಪೂರ್ವದ ಜಿಪಿಎಸ್‌ಯುಕ್ತ ಛಾಯಚಿತ್ರ |
| 3. | ತಾಂತ್ರಿಕ ಮಂಜೂರಾತಿ ಪಡೆದ ಆದೇಶದೊಂದಿಗೆ ಅಂದಾಜು ಪತ್ರಿಕೆ |
| 4. | ಕಾರ್ಯಾದೇಶ |
| 5. | ಅಳತೆ ಪುಸ್ತಕದಲ್ಲಿ ದಾಖಲಿಸಿದ ಪ್ರತಿ |
| 6. | ಕಾಮಗಾರಿ/ಚಟುವಟಿಕೆಯ ಅನುಷ್ಠಾನ ಹಂತದ ಜಿಪಿಎಸ್‌ಯುಕ್ತ ಛಾಯಚಿತ್ರ |
| 7. | ಬಿಲ್ಸ್ ಮತ್ತು ವೋಚರ್‌ಗಳ ಪ್ರತಿ |
| 8. | ಕಾಮಗಾರಿ ಮುಕ್ತಾಯದ ವರದಿ/ಓಕೆ ಕಾರ್ಡ್ |
| 9. | ಕಾಮಗಾರಿ/ಚಟುವಟಿಕೆ ಮುಕ್ತಾಯಗೊಂಡ ನಂತರದ ಜಿಪಿಎಸ್‌ಯುಕ್ತ ಛಾಯ ಚಿತ್ರ |

17. ಅನುಷ್ಠಾನಮಾಡಲಾದ ನೀರು ಸಂಗ್ರಹಣಾ ವಿನ್ಯಾಸಗಳ ಉತ್ಕೃಷ್ಟ ಗುಣಮಟ್ಟದ ದಿನಾಂಕಯುಕ್ತ ಜಿ.ಪಿ.ಎಸ್ ಯುಕ್ತ ಛಾಯಚಿತ್ರಗಳನ್ನು ಸೆರೆಹಿಡಿಯುವುದು ಹಾಗೂ ಕೇಂದ್ರ ಸರ್ಕಾರದ ಎಂ.ಐ.ಎಸ್ ಹಾಗೂ ಭುವನ್ ಪೋರ್ಟ್‌ಲ್‌ನಲ್ಲಿ ತಪ್ಪದೇ ಅಪ್‌ಲೋಡ್ ಮಾಡಬೇಕು.
18. 2020-21 ನೇ ಸಾಲಿನಿಂದ ಕಡ್ಡಾಯವಾಗಿ ಈ ಮೇಲಿನ ಯೋಜನೆಯಡಿ ಅನುಷ್ಠಾನ ಮಾಡಲಾದ ಕಾಮಗಾರಿಗಳಿಗೆ ಅಳತೆ ತಪಾಸಣೆ ವರದಿ ಕೈಗೊಳ್ಳುವ ಸಂಧರ್ಭದಲ್ಲಿ ಹಾಗೂ ಅನುಷ್ಠಾನ ಮಾಡಲಾದ ಕಾಮಗಾರಿ ಅಥವಾ ಚಟುವಟಿಕೆಗಳಿಗೆ ಹಣ ಸಂದಾಯ ಮಾಡಲು ಬಿಲ್ಲುಗಳನ್ನು ಮೇಲಾಧಿಕಾರಿಗಳಿಗೆ ಕಳುಹಿಸುವಾಗ ಸದರಿ ಕಾಮಗಾರಿಯು ಜಿಯೋಟ್ಯಾಗ್ ಮಾಡಲಾದ ಬಗ್ಗೆ ದಾಖಲೆಗಳನ್ನು ಪಡೆದು ಪರಿಶೀಲಿಸಿ, ದೃಢಿಕರಿಸಿ ನಂತರ ಹಣ ಪಾವತಿಗೆ ಶಿಫಾರಸ್ಸು ಮಾಡಲು ಸೂಚಿಸಿದೆ.

(ಪ್ರಭಾಷ್ ಚಂದ್ರ ರೇ) 18/6/2020
ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ
ಹಾಗು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಮತ್ತು ತೋಟಗಾರಿಕೆ ಇಲಾಖೆ

ಇವರಿಗೆ:

ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ,

ಪ್ರತಿಯನ್ನು:

ಮುಖ್ಯ ಲೆಕ್ಕಾಧಿಕಾಗಳು, ಕೇಂದ್ರ ಕಛೇರಿ ರವರಿಗೆ ಕಳುಹಿಸುತ್ತಾ ಜಿಲ್ಲೆಗಳಿಗೆ ಈ ದಿನವೇ ಅನುದಾನವನ್ನು ಬಿಡುಗಡೆಗೊಳಿಸಿ, ಉಪ ಶೀರ್ಷಿಕೆವಾರು ಅನುದಾನವನ್ನು ಅಪ್‌ಲೋಡ್ ಮಾಡುವುದು ಹಾಗೂ ಜಿಲ್ಲೆಗಳಿಗೆ ಅನುದಾನ ಜಮೆ ಆದ ಬಗ್ಗೆ ಖಾತ್ರಿಪಡಿಸಿಕೊಂಡು ಆಯುಕ್ತರಿಗೆ ವರದಿ ನೀಡಲು ಸೂಚಿಸಿದೆ.

ಪ್ರತಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ಆಯುಕ್ತರು ಕೃಷಿ ಇಲಾಖೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಆಯುಕ್ತರು ಮತ್ತು ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ
4. ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಹಾಗೂ ಅಧ್ಯಕ್ಷರು, ಜಿಲ್ಲಾ ಮಟ್ಟದ ಜಲಾನಯನ ಸಮಿತಿ (DLC), ತುಮಕೂರು ರವರಿಗೆ ಮಾಹಿತಿಗಾಗಿ
5. ಎಲ್ಲಾ ಘಟಕ ಮುಖ್ಯಸ್ಥರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ ಅಗತ್ಯ ಕ್ರಮಕ್ಕಾಗಿ.
6. ತುಮಕೂರು ಜಿಲ್ಲಾ ನೋಡಲ್ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ ಹಿಂಬಾಲಿಕೆ ಕ್ರಮಕ್ಕಾಗಿ.
7. ಕಛೇರಿ ಪ್ರತಿ